ಆಲ್ಬರ್ಟ್ ದೊಡ್ಡವನಾಗುತ್ತಿದ್ದಂತೆಯೇ ಜೇನ್ನೊಣಗಳ ಬಗ್ಗೆ ಅವನ ಆಸಕ್ತಿ ಮತ್ತಷ್ಟು ತೀವ್ರವಾಯಿತು. ಹನ್ನೆರಡನೆ ವಯಸ್ಸಿನಲ್ಲೇ ಅವನು ತನ್ನ ಮೊದಲ ಜೇನು ಪೆಟ್ಟಿಗೆಯನ್ನು ಕೂರಿಸಿದ. ಹದಿನಾಲ್ಕನೆ ವಯಸ್ಸಿಗೆ ಅವುಗಳ ಸಂಖ್ಯೆ ಐದಾಯಿತು. ಜೇನು ಕೂರಿಸುವುದು, ಜೇನು ಹಿಂಡುವುದು ಮಾತ್ರವಲ್ಲ ರಾಣಿ ನೊಣವನ್ನು ಸಾಕುವಂತಹ ನಾಜೂಕು ಕೆಲಸವೂ ಅವನಿಗೆ ರಕ್ತಗತವಾಗಿತ್ತು. ಅಂದರೆ, ಅವನು ಪಕ್ಕಾ ಜೇನು ತಜ್ಞನಾಗುವ ಹಾದಿ ಹಿಡಿದಿದ್ದ.

ಜೇನುನೊಣಗಳೊಂದಿಗೆ ಕೆಲಸ ಮಾಡುವಾಗ ಅವನು ಹೊಗೆಯನ್ನಾಗಲೀ, ಕೈಗವಸುಗಳ್ಳನಾಗಲೀ ಅಥವಾ ಜಾಲರಿ ಟೋಪಿಯನ್ನಾಗಲೀ ಎಂದೂ ಬಳಸುತ್ತಿರಲಿಲ್ಲ. ಅವನಿಗೂ ಜೇನುನೋಣಗಳಿಗೂ ಅದು ಯಾವುದೋ ವಿವರಿಸಲಾಗದ ವಿಶಿಷ್ಟ ನಂಟಿತ್ತು. ಈ ಬಗ್ಗೆ ಊರಿನ ಎಲ್ಲರಿಗೂ ಗೊತ್ತಾಗಿತ್ತು. ಅವರು ಅವನ ಜೊತೆ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಅವನ ಬಳಿಯಿಂದಲೇ ಜೇನನ್ನು ಖರೀದಿಸುತ್ತಿದ್ದರು.

ಅವನಿಗೆ ಹದಿನೆಂಟು ತುಂಬಿದಾಗ ಆಲ್ಬರ್ಟ್ ಊರ ಹೊರಗೆ ಒಂದು ಎಕರೆ ಚೆರಿ ತೋಟವನ್ನು ಗುತ್ತಿಗೆಗೆ ಹಿಡಿದು ಜೇನು ಕೃಷಿಯನ್ನು ಆರಂಭಿಸಿದ. ಇಂದಿಗೆ ಹನ್ನೊಂದು ವರ್ಷಗಳಾಗಿದ್ದವು. ಅವನ ಜೇನು ಕೃಷಿ ಆರು ಎಕರೆಗಳಿಗೆ ವಿಸ್ತರಿಸಿತ್ತು. ಅದರಲ್ಲಿ ಅವನು ಇನ್ನೂರನಲ್ವತ್ತು ಜೇನು ಪೆಟ್ಟಿಗೆಗಳನ್ನು ಇಟ್ಟಿದ್ದ. ಅದರಲ್ಲಿ ಅವನೇ ಒಂದು ಮನೆಯನ್ನು ಕಟ್ಟಿದ್ದ. ಇಪ್ಪತ್ತನೇ ವರ್ಷಕ್ಕೆ ಅವನು ಮದುವೆಯಾದ. ಒಂಬತ್ತು ವರ್ಷಗಳ ನಂತರ ಅವನಿಗೊಂದು ಹೆಣ್ಣು ಮಗು ಜನಿಸಿತ್ತು. ಈ ಮಗು ಹುಟ್ಟುವವರೆಗೆ ಅವನ ಜೀವನ ಯಾವುದೇ ತಂಟೆ ತಕರಾರುಗಳಿಲ್ಲದೆ ಸುಗಮವಾಗಿ ಸಾಗುತ್ತಿತ್ತು. ಈ ಮಗುವಿಗೆ ಹೊಟ್ಟೆಗೆ ಆಹಾರ ತೆಗೆದುಕೊಳ್ಳುವುದೆಂದರೆ ಆಗುತ್ತಿರಲಿಲ್ಲ ಮತ್ತು ಕ್ರಮೇಣ ಅದು ಸೊರಗತೊಡಗಿತು.

ಅವನ ಕಣ್ಣುಗಳು ನಿಯತಕಾಲಿಕದ ಮೇಲೆ ಹರಿದಾಡುತ್ತಿದ್ದವಾದರೂ ಮನಸ್ಸು ಮಾತ್ರ ಮಗುವಿನ ಬಗ್ಗೆಯೇ ಯೋಚಿಸುತ್ತಿತ್ತು.

ಆ ದಿನ ಸಂಜೆ ಮಲಗಿದ್ದ ಮಗು ಕಣ್ಣು ಬಿಟ್ಟಾಗ ಅವನು ತೊಟ್ಟಿಲಿನ ಬಳಿಯೇ ಇದ್ದ. ಅವನು ಬಗ್ಗಿ ಕೆಲಕಾಲ ಮಗುವಿನ ಕಣ್ಣುಗಳನ್ನೇ ದಿಟ್ಟಿಸಿದ. ಆ ದೃಶ್ಯ ಅವನನ್ನು ಕೆಲಕಾಲ ಧೃತಿಗೆಡಿಸಿತು. ಅವನಿಗೆ ಆ ಕಣ್ಣುಗಳು ಜೀವಂತಿಕೆ ಕಳಕೊಂಡ ಅಪಾರದರ್ಶಕ ಸುಣ್ಣ ಬಳಿದ ಗೋಡೆಗಳಂತೆ ಕಂಡವು. ಕಣ್ಣುಗಳಿಗೂ ಮೆದುಳಿಗೂ ಯಾವುದೇ ಸಂಬಂಧವಿಲ್ಲದೆ ಹೊಳಪಿಲ್ಲದ ಗೋಲಿಗಳಂತೆ ಕಾಣುತ್ತಿದ್ದವು.

ಈ ಉದ್ದುದ್ದನೆಯ ಡಿಗ್ರಿಗಳನ್ನು ನೇತಾಡಿಸಿಕೊಂಡಿರುವ ವೈದ್ಯರಿಗೆ ತಾವು ಏನು ಮಾತನಾಡುತ್ತಿದ್ದೇವೆಂದು ಅವರಿಗೇ ಅರ್ಥವಾಗುತ್ತಿಲ್ಲವೆಂದು ಕಾಣಿಸುತ್ತದೆ ಎಂದು ಅವನು ಯೋಚಿಸತೊಡಗಿದ.

ಬೂದಿ ಬಟ್ಟಲನ್ನು ಹತ್ತಿರಕ್ಕೆ ಎಳೆದು ಬೆಂಕಿ ಕಡ್ಡಿಯಿಂದ ಪೈಪನ್ನು ಶುಚಿಗೊಳಿಸತೊಡಗಿದ. ಆಕ್ಸ್‌ಫರ್ಡ್‌ಗೆ ಹೋಗುವುದಾದರೂ ಸರಿ, ಮಗುವನ್ನು ಬೇರೊಬ್ಬ ವೈದ್ಯರಿಗೆ ತೋರಿಸುವುದೊಳಿತು ಎಂದು ತೀರ್ಮಾನಿಸಿದ. ಮೇಲಕ್ಕೆ ಹೋದ ಮೇಲೆ ಈ ವಿಚಾರವನ್ನು ಮೇಬಲ್‌ಗೆ ತಿಳಿಸಬೇಕು ಎಂದುಕೊಂಡ.

ಮಹಡಿ ಮೇಲೆ ಮೇಬಲ್ ಇನ್ನೂ ನಡೆದಾಡುವ ಸದ್ದು ಕೆಳಗೆ ಕೇಳಿಸುತ್ತಿತ್ತು. ಬಹುಶಃ ಶೂಸನ್ನು ತೆಗೆದು ಸ್ಲಿಪರ್‌ಗಳನ್ನು ಹಾಕಿಕೊಂಡಿರಬೇಕು. ಹೆಜ್ಜೆಗಳ ಸಪ್ಪಳ ಕ್ಷೀಣವಾಗಿತ್ತು.

ಅವನು ಮತ್ತೆ ನಿಯತಕಾಲಿಕವನ್ನ ಓದಲು ತೊಡಗಿದ. ಅವನು ಓದುತ್ತಿದ್ದ ಲೇಖನದ ಶೀರ್ಷಿಕೆ 'ರಾಯಲ್ ಜೆಲ್ಲಿ' ('ರಾಜ ರಸಪಾಕ') ಎಂದಾಗಿತ್ತು. ಈ ಬಗ್ಗೆ ತಾನು ತಿಳಿದುಕೊಂಡಿರುವುದಕ್ಕಿಂತ